## ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಬಸವನ-ಬಾಗೇವಾಡಿ

**ಸಾಕ್ಷಿಗೆ ದಿನಾಂಕ 17/04/2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ದೂರುದಾರರ ಪರ ಶ್ರೀ ಆರ್ ಸಿ ಕೆ ವಕೀಲರಿಂದ**

**7.** ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ತಂದೆ-ತಾಯಿಗೆ ಮೂವರು ಹೆಣ್ಣು ಮಕ್ಕಳು ಮತ್ತು ನಾನೊಬ್ಬ ಮಗ. ನಮ್ಮ ತಂದೆ ಮುಖಾಂತರ ನನ್ನ ಪಾಲಿಗೆ 2 ಎಕರೆ ಜಮೀನು ಬಂದಿರುತ್ತದೆ. ನಾನು ವ್ಯಾಪಾರ ಮಾಡುತ್ತೇನೆ. ನಾನು ಜೆ.ಸಿ.ಬಿ. ಮತ್ತು ಕಾಂಕ್ರೀಟ್ ಮೀಸ್ಕರ ಮಾಡುವ ಮಷಿನಗಳನ್ನು ಹೊಂದಿದ್ದೇನೆ. ನಾನು ಈ ಎರಡು ವಾಹನಗಳನು 2017-2018 ರಲ್ಲಿ ಖರೀದಿಸಿದ್ದೆ. ಸನ್ 2022 ರಲ್ಲಿ ನಾನು 3 ಎಕರೆ ಜಮೀನು ಖರೀದಿಸಿದ್ದೇನೆ. ಸದರಿ 3 ಎಕರೆ ಜಮೀನನ್ನು 3 ಲಕ್ಷಕ್ಕೆ ಖರೀದಿ ಮಾಡಿದ್ದೇನೆ.

8. ಈ ಪ್ರಕರಣದ ದೂರುದಾರರು ಮತ್ತು ನಾನು ಸಂಬಂಧಿಕರು ಎಂದರೆ ಸರಿ. ಅವರು ನನ್ನ ಆತ್ಮಿಯರು ಎಂದರೆ ಸರಿ.

9. ಸನ್ 2022 ರ ಮುನ್ನ ನಾನು ದೂರುದಾರರ ಜಮೀನನ್ನು ವಿಂಡ್ ಪವರ್ ಕಂಪನಿಗೆ ಏಜೆಂಟನಾಗಿ ಮಾರಾಟ ಮಾಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ರೀತಿ ಮಾರಾಟ ಮಾಡಿಸಿದಾಗ ಬಂದ ಹಣದಲ್ಲಿ ನಾನು ನನಗೆ ಜೆ.ಸಿ.ಬಿ., ಕಾಂಕ್ರೀಟ್ ಮೀಸ್ಕರ ಮತ್ತು 3 ಎಕರೆ ಜಮೀನು ಖರೀದಿಸಲು ಹಣದ ಸಹಾಯ ಬೇಕೆಂದು ದೂರುದಾರರಿಗೆ 9,50,000/- ರೂಗಳ ಹಣವನ್ನು ಸಾಲವಾಗಿ ಕೇಳಿದ್ದೆ ಎಂದರೆ ಸರಿಯಲ್ಲ. ಅದರಂತೆ ದಿಃ 14.07.2021 ರಂದು 9,50,000/- ರೂಗಳ ಹಣವನ್ನು ದೂರುದಾರರು ತಮ್ಮ ಬ್ಯಾಂಕಿನಿಂದ ಹಣ ತಗೆದು ಬ.ಬಾಗೇವಾಡಿಯಲ್ಲಿ ನನಗೆ ನೀಡಿದ್ದಾರೆ ಎಂದರೆ ಸರಿಯಲ್ಲ. ದೂರುದಾರರು ನನಗೆ ಹಣ ನೀಡುವಾಗ 6 ತಿಂಗಳು ಅಥವಾ 1 ವರ್ಷದ ಒಳಗೆ ಹಣ ಮರು ಪಾವತಿ ಮಾಡಬೇಕೆಂದು ಷರತ್ತು ಹಾಕಿ ಹಣ ನೀಡಿದ್ದರು ಎಂದರೆ ಸರಿಯಲ್ಲ.

10. ನಂತರ ದೂರುದಾರರು ನನಗೆ ಸಾಕಷ್ಟು ಸಲ ಹಣ ಮರುಪಾವತಿ ಮಾಡಲು ಕೇಳಿದಾಗ ನಾನು ನಿಪಿ-1 ರಂತೆ ಚಕ್ಕನ್ನು ದೂರುದಾರರಿಗೆ ನೀಡಿದ್ದೇನೆ ಎಂದರೆ ಸರಿಯಲ್ಲ. ದೂರುದಾರರು

ಸದರಿ ಚಕ್ಕನ್ನು ನಗದೀಕರಣಕ್ಕೆ ಹಾಕುವ ಮುನ್ನವೇ ನಾನು ಬ್ಯಾಂಕಿಗೆ ಅರ್ಜಿ ಸಲ್ಲಿಸಿ ಸ್ಟಾಪ್ ಪೇಮೆಂಟ್ ಮಾಡಿಸಿ ನನ್ನ ವಕೀಲರ ಮೂಲಕ ಸುಳ್ಳು ಮಾಹಿತಿ ನೀಡಿ ದೂರುದಾರರಿಗೆ ನೋಟೀಸನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ನೋಟೀಸಿಗೆ ದೂರುದಾರರು ಮರುಉತ್ತರ ನೀಡಿರುವುದಿಲ್ಲ.

11. ನಾನು ಮೂರು ಚಕ್ಕುಗಳನ್ನು ಕಳೆದುಕೊಂಡಿರುತ್ತೇನೆ. ಅವುಗಳ ನಂಬರ 571805, 571806 ಮತ್ತು 571807 ಆಗಿರುತ್ತದೆ. ಸದರಿ ಮೂರು ಚಕ್ಕುಗಳಿಗೆ ನಾನು ಸಹಿ ಮಾಡಿದ್ದೆ ಬೇರೆ ಯಾವುದೇ ಅಂಶಗಳನ್ನು ನಮೂದಿಸಿರುವುದಿಲ್ಲ. ಸದರಿ ಚಕ್ಕುಗಳನ್ನು ಕಳಿದುಕೊಂಡ ಬಗ್ಗೆ ನನಗೆ 2022 ರ ಜನೇವರಿ ಮೊದಲನೇ ವಾರದಲ್ಲಿ ಗೊತ್ತಾಗಿರುತ್ತದೆ. ನಂತರ ನಾನು ದಿಃ 08.09.2022 ರಂದು ಸ್ಟಾಪ್ ಪೇಮೆಂಟ್ ಮಾಡಿಸಿರುತ್ತೇನೆ. ನಾನು 9 ತಿಂಗಳು ಕಳೆದುಹೋದ ಚಕ್ಕುಗಳನ್ನು ಹುಡುಕಾಡಿರುತ್ತೇನೆ. ನಿವೇನಾದರು ಪೂಲೀಸರಿಗೆ ದೂರನ್ನು ನೀಡಿದ್ದಿರಾಎಂಬ ಪ್ರಶ್ನೇಗೆ ಊರ ಹಿರಿಯರು ಇಸಿದುಕೊಡುತ್ತೇವೆ ಎಂದು ಊರ ಹಿರಿಯರು ಹೇಳಿದ್ದರಿಂದ, ನಾನು ಪೊಲೀಸರಿಗೆ ದೂರನ್ನು ನೀಡಿರುವುದಿಲ್ಲ.

12. ಚೆಕ್ಕುಗಳು ದೂರುದಾರರ ಹತ್ತಿರ ಇವೆ ಎಂದು 2023 ರ ಜನೇವರಿ ಮೊದಲನೇ ವಾರದಲ್ಲಿ ಗೊತ್ತಾಯಿತು. ನಿಮಗೆ ಹೇಗೆ ಗೊತ್ತಾಯಿತು ಎಂದರೆ ಸಾಕ್ಷಿದಾರರು ನನ್ನ ಸಂಬಂಧಿಕರ ಮೂಲಕ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ಅವರ ಹೆಸರು ನನಗೆ ಹೇಳಲು ಬರುವುದಿಲ್ಲ. ನನಗೆ ಗೊತ್ತಾದ ನಂತರ ನಾನು ಊರ ಹಿರಿಯರು ಕುಡಿಸಿರುತ್ತೇನೆ. ಆಗ ಊರ ಹಿರಿಯರು ನನ್ನನ್ನು ಮತ್ತು ದೂರುದಾರರು ಮತ್ತು ಅವರ ಕುಟುಂಬದವರ ನಡುವೆ ಸಮಸ್ಯಯನ್ನು ಬಗೆಹರಿಸಿದಾಗ 1 ವಾರದ ಒಳಗೆ ನನ್ನ ಚಕ್ಕುಗಳನ್ನು ಮರಳಿ ನೀಡುವುದಾಗಿ ಒಪ್ಪಿಕೊಂಡಿರುತ್ತಾರೆ. ಮಾರುತಿ ನಾಯಕ್, ಅಣ್ಣಪ್ಪ ಚವ್ಹಾಣ ಮತ್ತು ಲಾಲು ತಂ. ಸುಬ್ಬು ಲಮಾಣಿ, ಲಾಲು ತಂ. ಕೇಮು ಲಾಮಾಣಿ, ಗೋಪಾಲ ತಂ. ಹೂವಪ್ಪ ಚವ್ಹಾಣ ಮತ್ತು ಇನ್ನಿತರರು ಊರ ಹಿರಿಯರು ಸಂದಾನ ಮಾಡಿಸಿರುತ್ತಾರೆ. ಆದರು ಸಹಿತ ದೂರುದಾರರು ಚಕ್ಕುಗಳನ್ನು ಮರಳಿ ನೀಡಿರುವುದಿಲ್ಲ.

**13.** ದೂರುದಾರರು ನನಗೆ 9,50,000/- ರೂ. ಹಣ ನೀಡಿಲ್ಲ ಎಂದು ನಾನು ಸುಳ್ಳು ಸಾಕ್ಷಿ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಸಲ್ಲಿಸಿದ ಎಲ್ಲ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ಚೆಕ್ ನಂಃ 571805 ಕಳೆದುಹೋಗಿದ್ದು, ಅದರ ಬಗ್ಗೆ ಮುಂದಿನ ಮಾಹಿತಿ ಇಲ್ಲ. ಸದರಿ ಚೆಕ್ಕನ್ನು ನಾನು ವೆಂಕಟೇಶ ಲಮಾಣಿ ಎನ್ನುವವರಿಗೆ 5 ಲಕ್ಷ ರೂಪಾಯಿ ನಮೂದಿಸಿ ನೀಡಿದ್ದೆ ಎಂದರೆ ಸರಿಯಲ್ಲ. ಸದರಿ ಚೆಕ್ಕು ದಿಃ 10/10/2022 ರಂದು ನಗದೀಕರಣವಾಗದೇ ಹಿಂತಿರುಗಿಸಲಾಗಿದೆ ಎಂದರೆ ಸರಿಯಲ್ಲ. ಆಗ ಅವರೆಲ್ಲರೂ ನನ್ನನ್ನು ಕೇಳಿದಾಗ ನಾನು ಹಣ ನೀಡಲು ಒಪ್ಪಿಕೊಂಡಿದ್ದೆ ಎಂದರೆ ಸರಿಯಲ್ಲ. ನಾನುದೂರುದಾರರಿಂದ 9,50,000/- ರೂ. ಹಣವನ್ನು ಸಾಕ್ಷಿದಾರರಾದ ಅಜಿತ್ ಲಮಾಣಿ, ರಾಮು ಲಮಾಣಿ ಇವರ ಸಮಕ್ಷಮ ಬಾಗೇವಾಡಿಯಲ್ಲಿ ತೆಗೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಪಡೆದ 9,50,000/- ರೂ. ಹಣವನ್ನು ಮರುಪಾವತಿ ಮಾಡುವುದನ್ನು ತಪ್ಪಿಸಲು ಮತ್ತು ದೂರುದಾರರಿಗೆ ಮೋಸ ಮಾಡುವ ಉದ್ದೇಶದಿಂದ ನಿಪಿ-1 ಅನ್ನು ನೀಡಿ ನಾನೇ ಅದನ್ನು stop payment ಮಾಡಿಸಿ ನನ್ನ ವಕೀಲರಿಗೆ ಸುಳ್ಳು ಮಾಹಿತಿ ನೀಡಿ ಈಗ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ತೇಜಸ್ವಿನಿ ಸೊಗಲದ)**
**ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ**.